ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 30ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಶಿವಮೊಗ್ಗ ಡಿಸ್ಟ್ರಿಕ್ಟ್ ಶಿವಮೊಗ್ಗ ತಾಲ್ಲೂಕು ಜೋಡಿ ಭಂಡಾರಿಹಳ್ಳಿ ಗ್ರಾಮವು ಕಂದಾಯದ ಬಾಕಿಗಾಗಿ 1903ನೇ ಸೆಪ್ಟಂಬರ್ 10ನೇ ತಾರೀಖಿನಲ್ಲಿ ಶಿವಮೊಗ್ಗ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಈ ವಿಷಯದಲ್ಲಿ ತಪಸೀಲು ಇಸ್ತಿಹಾರ್ 1903ನೇ ಇಸವಿ ಆಗಸ್ಟ್ ತಿಂಗಳು 13ನೇ ಮತ್ತು 32ನೇ ನಂಬರ್ ಮೈಸೂರು ಗೆಜೆಟ್ ಎರಡನೇ ಭಾಗದ 450ನೇ ಪೇಜಿನಲ್ಲಿ ಪ್ರಾಯಿಷಾಗಿ ಇದೆ.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯೂಟಿ ಕಮಿಷನರ್.

ಹಾಸನದ ಡಿಸ್ಟ್ರಿಕ್ಟ್ ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ಯ 1903—1904ನೇ ಇಸವಿ ಮಿ॥ ಅರ್ಜೀ ನಂಬರ್ 33.

ಅರಕಲಗೂಡು ತಾಲ್ಲೂಕು ಕಸಬಾ D. P. W. ಇಲಾಖಾ ತಾಲ್ಲೂಕು ಮೇಸ್ತ್ರಿಯಾಗಿದ್ದು ಛವತಿಪಟ್ಟ ಬೇವಹಳ್ಳಿ ವೆಂಕಟರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಹಾಲಿ ಗೋರಿಬಿದನೂರು ತಾಲ್ಲೂಕು ಕಡಬೂರಲ್ಲಿ ಲೋಕಲ್‌ಫಂಡು ಓವರ್‌ಸಿಯರು ಕೆ. ಲಕ್ಷ್ಮ್ಮನಾರಪ್ಪಯ್ಯನವರ ಮನೇಲಿ ಇರುವ ಬೇವಹಳ್ಳಿ ವೆಂಕಟರಾಯರ ಹೆಂಡತಿ ಗೌರಮ್ಮನೆಂಬಾಕೆಯು, ಛವತಿ ಬೇವಹಳ್ಳಿ ವೆಂಕಟರಾಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೃತಪಟ್ಟ ಗಂಡನಿಗೆ ಬರತಕ್ಕ 2,185—15—0 ಸಾಲವನ್ನು ವಸೂಲ್ ಮಾಡುವ ದಕ್ಕೆ ಸ್ಯ 1901ನೇ ಇಸವಿ VIIನೇ ರೆಗ್ಯುಲೇಷ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಗೌರಮ್ಮನ ಅರ್ಜಿಯನ್ನು ಸ್ಯ 1903ನೇ ಇಸವಿ ಸೆಪಟಂಬರು ತಿಂಗಳು 11ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೇವಹಳ್ಳಿ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1903ನೇ ಇಸವಿ ಆಗಸ್ಟ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1903—1904ನೇ ಮಿಸಲೇನಿಯಸ್ ಅರ್ಜೀ ನಂಬರ್ 60.

ಹಾಸನ ಡಿಸ್ಟ್ರಿಕ್ಟ್ ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಶಿಂಗೋಡನಹಳ್ಳಿ ಗ್ರಾಮದಲ್ಲಿರುವ ಛವತಿ ಬಟ್ಟೇಗೌಡನಿಗೆ ಬರಬೇಕಾದ ಸಾಲವನ್ನು ಬರಮಾಡಿಕೊಳ್ಳತಕ್ಕ ವಿಷಯದಲ್ಲಿ—

ಅರ್ಜೀದಾರರಾದ ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಶಿಂಗೋಡನಹಳ್ಳೀಲಿರುವ ರಂಗೇಗೌಡ ಮೈನರು, ಗಾರ್ಡಿಯರ್ ತಾಯಿ 1ನೇ ಜವರಮ್ಮ, 2ನೇ ಜವರಮ್ಮ ಸಹಾ, ಮೃತಪಟ್ಟ ಬೆಟ್ಟೇಗೌಡನಿಗೆ ಮಗು ಮತ್ತು ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೃತಪಟ್ಟ ಬಟ್ಟೇಗೌಡನಿಗೆ ಬರತಕ್ಕ 100 ನೂರು ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರು ರಂಗೇಗೌಡ ಮೈನರ್, ಗಾರ್ಡಿಯರ್ ತಾಯಿ ಜವರಮ್ಮ 2. ಜವರಮ್ಮ ಇವರ ಅರ್ಜಿಯನ್ನು ಸ್ಯ 1903ನೇ ಇಸವಿ ಸೆಪ್ಟಂಬರ್ ಮಾಹೆ 18ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೆಟ್ಟೇಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1903ನೇ ಇಸವಿ ಆಗಸ್ಟ್ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಬಿ. ಶೇಷಗಿರಿರಾವ್,
ಸಬ್ ಜಡ್ಜ್.

ಚಿಕ್ಕವುಗಳೂರು ಸಬ್ ಜಡ್ಜ್ ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೇ ಇಸವಿ ಅರ್ಜೀ ನಂಬರ್ 1.

ಮೃತಪಟ್ಟ ಗೊಳಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಕಡೂರುನಲ್ಲಿರುವ ಹೊನ್ನಪ್ಪನ ಹೆಂಡತಿ ಕಾಳವ್ವ, ಮೃತಪಟ್ಟ ಗೊಳಪ್ಪನವರಿಗೆ ತಾಯಿಯಾಗಬೇಕೆಂಬ ಹಕ್ಕುದಾರಿ ಮೇಲೆ ಕಡೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಗೊಳಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊನ್ನಪ್ಪನ ಹೆಂಡತಿ ಕಾಳವ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಸೆಪ್ಟಂಬರ್ ತಿಂಗಳು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೊಳಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೩—೧೯೦೪ನೇ ಇಸವಿ ಅರ್ಜೀ ನಂಬರ್ 34.

ಮೃತಪಟ್ಟ ಕುಂಡ್ರದ ಮಂಜೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕು ಕೊಳೂರು ಮಾಗಣಿ ಹೊಸಹಳ್ಳಿ ದಾಖಲೆ ಬೆಳಗೂರು ವಾಸನ ಕಲ್ಲೇಗೌಡ, ಮೃತಪಟ್ಟ ಕುಂಡ್ರದ ಮಂಜೆಗೌಡನಿಗೆ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಬೆಳಗೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಕುಂಡ್ರದ ಮಂಜೆಗೌಡನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಲ್ಲೇಗೌಡ ರವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಸೆಪಟಂಬರ್ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಡ್ರದ ಮಂಜೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಆಗಸ್ಟ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮೇಶ್ವರ ಐಯ್ಯರ್,
ಸಬ್ ಜಡ್ಜ್.

ತುಮಕೂರು ಮುನ್ಸೀಫ್ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೇ ಇಸವಿ ಮಿಸಲೇನಿಯಸ್ ನಂಬರ್ 36.

ಮೃತಪಟ್ಟ ಕುಣಿಗಲ್ ರಾಮೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ವೆಂಕಟ್ಯಾವು, 2ನೇ ಕೆ. ಶ್ರೀನಿವಾಸರಾವು, 3ನೇ ಕೃಷ್ಣರಾವು, 4ನೇ ಸುಬ್ಬರಾವು, 5ನೇ ಭೀಮರಾವು, 3—4—5ನೇ ಮೈನರ್, ಗಾರ್ಡಿಯರ್ 1ನೇ ಅರ್ಜಿದಾರ ವೆಂಕಟ್ಯಾವು, ಇವರುಗಳು ಫವುತಿ ರಾಮೈಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ರಾಮೈಯ್ಯನವರಿಗೆ ಮೈಸೂರ ಗವರ್ನಮೆಂಟ್ ಸ್ಟೇಟ್ ಲೈಫ್ ಇನ್ಷ್ಯೂರೆನ್ಸ್ ಪಾಲಿಸಿಗಳ ಬಾಬು ತು 345—0—0 ರೂಪಾಯಿಗಳನ್ನ ವಸೂಲ್ ಮಾಡಿಕೊಳ್ಳತಕ್ಕ ಬಗ್ಯೆ 1901ನೇ ಇಸವಿ VIIನೇ ನಂಬರ್ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಣಿಗಲ್ ರಾಮೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಶೇಷಗಿರಿರಾವ್, ಮುನ್ಸೀಫ್.

ಗೆಜೆಟ್ ಇಸ್ತಿಹಾರ್.

ಮೈಸೂರ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಪೋಸ್ಟಿಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಟ್ಟು ರೋಣದರಿಂದ ಸದರೀ ಕಾಪಿಗಳು ಗೈರಿವಿಲೆ ಅಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರ್ರವರು ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರಿವಿಲಿಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.